ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇವೊತ್ತಿನ ಅಜೆಂಡಾ ಪ್ರಕಾರ ಚರ್ಚೆಯಾಗಬೇಕಾದ ಒಂದೇ ವಿಷಯ ಉಳಿದಿದೆ. ಅದೇನೆಂದರೆ, ನಿಯಮ 69ರ ಕೆಳಗೆ ಮಾನ್ಯ ಸದಸ್ಯರುಗಳಾದ ಸಿ.ಎಂ. ಲಿಂಗಪ್ಪನವರು ಮತ್ತು ಎ.ಟಿ. ರಾಮಸ್ವಾಮಿಯವರು ಪ್ರಸ್ತಾಪಿಸುವವರಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಅಧ್ಯಕ್ಷರ ಅಪ್ಪಣೆ ಏನಾಗಿದೆಯೆಂದರೆ, ಮೊದಲು ಶೂನ್ಯ ವೇಳೆ ತೆಗೆದುಕೊಳ್ಳಿ, ಅನಂತರ ತಾವು ಬರುವುದಾಗಿ ಹೇಳಿರುವುದರಿಂದ, ಈಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನಾನು ಮಾನ್ಯ ಸದಸ್ಯರಾದ ಬಿ.ಬಿ. ಶಿವಪ್ಪನವರು ಕರೆದಿದ್ದು, ಶೂನ್ಯ ವೇಳೆ ಮುಗಿಯುವುದರೊಳಗೆ ಅಧ್ಯಕ್ಷರು ಬರುತ್ತಾರೆ. ನಂತರ, ಅವರು ನಿಯಮ 69ನ್ನು ಚರ್ಚೆಗೆ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಗಬಹುದು.

ಸಕಲೇಶಪುರ ತಾಲ್ಲೂಕಿನ ಮಣಿಗನಹಳ್ಳಿಯ ಹೇಮಂತ ಎಂಬುವವರನ್ನು ಕೊಲೆ ಮಾಡಿ ಹೊಳೆಗೆ ಎಸೆದಿರುವುದು.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ನನ್ನ ಕ್ಷೇತ್ರದಿಂದ ನನಗೆ ಒಂದು ಪತ್ರ ಬಂದಿದೆ. ಮಣಿಗನಹಳ್ಳಿ ಬಸವರಾಜು ಎಂಬುವವರ ಮಗ 19 ವರ್ಷ ವಯಸ್ಸುಳ್ಳ ಹೇಮಂತ ಎಂಬುವವರನ್ನು ದಿನಾಂಕ 18.1.98ರಂದು ಅದೇ ಊರಿನವರು ಸೇರಿಕೊಂಡು ಆತನನ್ನು ಕೊಲೆ ಮಾಡಿ ಹೊಳೆಗೆ ಎಸೆದಿದ್ದರು. ಇದರ ಬಗ್ಗೆ ಆಲೂರು ಪೊಲೀಸರು ಮಹಜರು, ವಗೈರೆ, ಎಲ್ಲಾ ನಡೆಸಿ ದೇವರಾಜ್ ಎಂಬುವವರನ್ನು ಮಾತ್ರ ಒಳಗಡೆ ಇಟ್ಟಿದ್ದಾರೆ, ಇಷ್ಟು ಬಿಟ್ಟರೆ ಬೇರೆ ಯಾವ ವಿಧವಾದ ತೀರ್ಪು ಕೊಡದೆ ಪ್ರತಿ ದಿನ ಪೊಲೀಸರ ಬಳಿಗೆ ತಿರುಗಿ ಸಾಕಾಗಿ ಅವರಿಂದ ಇದುವರೆವಿಗೂ ಯಾವುದೇ ರೀತಿಯ ಪ್ರತಿಕ್ರಿಯೆ ಇಲ್ಲದೆ ಚೆನ್ನಾಗಿ ದುಡ್ಡು ತಿಂದು ನಮಗೆ ಯಾವುದೇ ರೀತಿಯ ನ್ಯಾಯ ಸಿಕ್ಕಿದಂತೆ ಕಾಣುವುದಿಲ್ಲ. ಆದುದರಿಂದ ನಮ್ಮ ಜಿಲ್ಲೆಯ ಧಣಿಯವರನ್ನೇ ಹಿಡಿಯಬೇಕೆಂದು ತಮ್ಮಲ್ಲಿ ಇವರು ಬರುತ್ತಿರುವುದರಿಂದ ದಯಮಾಡಿ ಬದುಕಿಬಾಳಬೇಕಾದ ಪ್ರಾಯದ ಮಗನನ್ನು ಕಳೆದುಕೊಂಡ ಇವರಿಗೆ ತಾವೇ ದಾರಿ ತೋರಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆಂದು ಪತ್ರ ಬರೆದಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಈ ಪತ್ರ ಬರೆದವರು ಬೇರಾರೂ ಅಲ್ಲ. ಹಿಂದೆ ಡಿ.ಜಿ.ಪಿ. ಆಗಿದ್ದಂಥ ಸನ್ಮಾನ್ಯ ಗರುಡಾಚಾರ್ ಅವರ ಸಹೋದರಿ. ಬಹುಶಃ ಈ ವ್ಯಕ್ತಿ ಅವರ ಪಕ್ಕದ ಊರಿನವರಿರಬೇಕು. ವಿಷಯವೇನೆಂದರೆ, ದಿನಾಂಕ 18.1.98ರಂದು ಹೇಮಂತ ಎಂಬ ಹುಡುಗನ ಮನೆಗೆ ರವಿ, ಪ್ರಕಾಶ್, ಶಿವಣ್ಣ ಮತ್ತು ದೇವರಾಜು ಎಂಬ ನಾಲ್ಕು ಜನರು ಬಂದು ಆತನನ್ನು ಕರೆದುಕೊಂಡು ಹೋಗುತ್ತಾರೆ. ಮನೆಯಿಂದ ಹೋದಂಥ ವ್ಯಕ್ತಿ ಮತ್ತೆ ವಾಪಸ್ಸು ಮನೆಗೆ ಬರುವುದಿಲ್ಲ. ಎರಡು ದಿವಸಗಳ ನಂತರ ಆತನ ಶವ ಹೇಮಾವತಿ ನದಿಯಲ್ಲಿ ಸಿಗುತ್ತದೆ. ಅದನ್ನು ಪೊಲೀಸರು ತೆಗೆದು ಮಹಜರು, ವಗೈರೆ